# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.128-2011** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಮೂರ್ತಿ<br>ಮುದ್ದಹಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 07-07-2022. |

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ-11 ಮತ್ತು 12 ಪರ ಶ್ರೀ ಎಸ್.ವಿ ವಕೀಲರಿಂದಃ**

3. ಗೌರಮ್ಮ ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-17 ವಂಶವೃಕ್ಷದಲ್ಲಿ ನಮೂದು ಮಾಡಿರುವ ಗೌರಮ್ಮ ನನ್ನ ತಂದೆಯವರ ಅಕ್ಕನೆ ಅಲ್ಲವೆ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ಸದರಿ ಗೌರಮ್ಮನವರನ್ನು ವಂಶವೃಕ್ಷದಲ್ಲಿ ಪೌತಿ ಎಂದು ತೋರಿದ್ದು,ಅವರ ಗಂಡ ಮಕ್ಕಳನ್ನು ದಾವೆಗೆ ಸೇರಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನಗೆ ಗೊತ್ತಿಲ್ಲ ಆಗಾಗಿ ನಾನು ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಗೌರಮ್ಮನವರವ ವಾಸರುದಾರರನ್ನು ಈ ದಾವೆಗೆ ಪಕ್ಷಕಾರರನ್ನಾಗಿ ಮಾಡದೇ ಇರುವುದರಿಂದ ಈ ದಾವೆ ಊರ್ಜಿತವಾಗತಕ್ಕದಲ್ಲ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ನ್ಯಾಯಾಲಯಕ್ಕೆ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ದಾವಾವನ್ನು ವಿಭಾಗಕ್ಕಾಗಿ ಸಲ್ಲಿಸಿದ್ದು, ಅವಶ್ಯಕ ಪಕ್ಷಕಾರರನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ದಾವಾವು ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.37 ದಾವಾ ಐಟಂ ನಂ.4 ಸ್ವತ್ತು ಪ್ರತಿವಾದಿ-11 ರಿಂದ 13 ರವರ ತಂದೆ ಮರಪ್ಪನವರ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಮರಪ್ಪನವರ ಭಾಗಕ್ಕೆ ಮೇಲ್ಕಂಡ ಸ್ವತ್ತು ಬಂದಿದ್ದರಿಂದ ಪ್ರತಿವಾದಿ-11 ರಿಂದ 13 ರವರು 14 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನಮಗೆ ಯಾವುದೇ ಭಾಗವನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

4.ದಾವಾ ಐಟಂ ನಂ.4 ರ ಸ್ವತ್ತಿನ ಪೈಕಿ 0.24 ಗಂಟೆ ಸ್ವತ್ತನ್ನು 11 ರಿಂದ 13 ನೇ ಪ್ರತಿವಾದಿಗಳು14 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದರಿಂದ ಒಂದೇ ಚೆಕ್ಕುಬಂದಿ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾದಲ್ಲಿ ಸರ್ವೆ ನಂ.37 ರ ಒಟ್ಟು ವಿಸ್ತೀರ್ಣವನ್ನು 1

ಎಕರೆ 0.4 ಗುಂಟೆ ಎಂದು ಬರೆಸಿರುವುದರಿಂದ 14 ನೇ ಪ್ರತಿವಾದಿಗೆ ಮಾರಾಟವಾದ ನಂತರ ವಿಸ್ತೀರ್ಣದಲ್ಲಿ ವ್ಯತ್ಯಾಸವಾಗುತ್ತದೆ ಎಂದರೆ ಸರಿಯಲ್ಲ. ಮರಪ್ಪನವರ ಭಾಗಕ್ಕೆ ಬಂದಂತಹ ಸ್ವತ್ತುಗಳನ್ನು ಮರಪ್ಪನವರು ಅವರ ಜೀವಿತಾವಧಿವರೆಗೆ ಅನುಭವಿಸುತ್ತಿದ್ದು, ಅವರ ಮರಣಾ ನಂತರ ಪ್ರತಿವಾದಿ-11 ರಿಂದ 13 ರವರು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅಪ್ಪಯ್ಯನ ಮಕ್ಕಳೆಲ್ಲರೂ ಈಗಾಗಲೇ ವಿಭಾಗವಾಗಿದ್ದು ಜಂಟಿ ಕುಟುಂಬದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಅಪ್ಪಯ್ಯನವರ ಮಕ್ಕಳು 30 ವರ್ಷಗಳ ಹಿಂದೆಯೇ ವಿಭಾಗವಾಗಿರುವುದರಿಂದ ವಿಭಾಗ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಗಳು ಜಂಟಿ ಕುಟುಂಬದಲ್ಲಿ ವಾಸವಿಲ್ಲದೇ ಇರುವುದರಿಂದ ಜಂಟಿ ಕುಟುಂಬದ ಅಸ್ತಿತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ನೀಡುವ ಉದ್ದೇಶದಿಂದ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದೆರ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**